**(ಇಂದು ದಿಃ 13-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.SBM ವಕೀಲರಿಂದಃ-</u>**

ನಾನು 9 ನೇ ತರಗತಿಯವರೆಗೆ ವಿದ್ಯಾಭಾಸ ಮಾಡಿದ್ದೇನೆ. ಕನ್ನಡ ಓದಲು ಬರುತ್ತದೆ . ಇಂಗ್ಲೀಷ ಓದಲು ಬರೆಯಲು ಬರುಹುದಿಲ್ಲ. ಎರಡು ದಾವಾ ಆಸ್ತಿಗಳ ಚೆಕ್ ಬಂದಿ ಬೇರೆ ಬೇರೆ ಇವೆ ಎಂದರೆ ಸರಿ. ಎರಡು ದಾವಾ ಆಸ್ತಿಗಳ Revenue Assessment ಬೇರೆ ಬೇರೆ ಇವೆ ಎಂದರೆ ಸರಿ. ಎರಡು ಜಮೀನುಗಳ ವಿಸ್ತೀರ್ಣ ಬೇರೆ ಬೇರೆ ಇವೆ ಎಂದರೆ ಸರಿ.1976 ರ ನೋಂದಾಯಿತ ಖರೀದಿ ಪತ್ರದ ಪ್ರಕಾರ ಪ್ರತಿವಾದಿಯ ಹೆಸರು ಪಹಣಿಯಲ್ಲಿ ಬಂದಿದೆ ಎಂದರೆ ಸರಿ. ಪ್ರತಿವಾದಿ ಕಲಬುರಗಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ . ವಾದಿಯಾರಾದ ನಾವು ಪ್ರತಿವಾದಿಯ ಹೆಸರನ್ನು ಪಹಣಿಯಿಂದ ಯಾವುದೇ ಮುಟೇಷನ್ ಆದೇಶ ಇಲ್ಲದೇ ತೆಗೆದು ಹಾಕಿಸಿ ನಮ್ಮ ಹೆಸರು ಸೇರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಹೆಸರಲ್ಲಿ ಆಗಿರುವ ಪಹಣಿಗೆ ಆಧಾರವಾಗಿರುವ ಮುಟೇಷನ್ನು ಹಾಜರುಪಡಿಸಿದ್ದೇನೆ. ಸದರಿ ಮುಟೇಷನ್ ಮಾಡುವಂತೆ ಕೋರಿ ನನ್ನ ತಂದೆ ಅರ್ಜಿ ಕೊಟ್ಟಿದ್ದರು. ಸದರಿ ಅರ್ಜಿ ನನ್ನ ಬಳಿ ಇಲ್ಲ . ನನ್ನ ತಂದೆ ಅರ್ಜಿ ಕೊಟ್ಟು ನಮ್ಮ ಹೆಸರಿಗೆ ಮುಟೇಷನ್ ಮಾಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1988 ರಲ್ಲಿ ವಾದಿಯರು ಮತ್ತು ಇತರರ ನಡುವೆ ವಿಭಾಗ ನನ್ನ ತಂದೆ ಮಾಡಿದ್ದಾರೆ . ಆ ಬಗ್ಗೆ ದಾಖಲಾತಿ ಆಗಿಲ್ಲ. ವಿಭಾಗದ ಪ್ರಕಾರ ಪಹಣಿ ಆಗಿದೆ. 1988 ರಲ್ಲಿ ನಾವು ಕಾನೂನು ಬಾಹಿರವಾಗಿ ಪಹಣಿಯಲ್ಲಿ ಹೆಸರು ಸೇರಿಸಿಕೊಂಡಿದ್ದೇವೆ ಎಂದು ಅದನ್ನು ಪ್ರಶ್ನಿಸಿ ಪ್ರತಿವಾದಿ ಉಪ ವಿಭಾಗ ಅಧಿಕಾರಿಗಳ ಮುಂದೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ಮಂಜೂರಾಗಿದೆ ಮತ್ತು ಅದರಂತೆ ಪಹಣಿ ಆಗಿದೆ ಎಂದರೆ ಸರಿ. ಸದರಿ ಆದೇಶ ಪ್ರಶ್ನಿಸಿ ನಾವು ಜಿಲ್ಲಾ ಅಧಿಕಾರಿಗಳ ಮುಂದೆ ರೀವಿಜನ್ ಸಲ್ಲಿಸಿದ್ದವು ಎಂದರೆ ಸರಿ. ಸದರಿ ರೀವಿಜನ್ ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶ ಪ್ರಶ್ನಿಸಿ ರೀಟ್ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಿವಿಲ್ ಕೋರ್ಟಿ ಗೆ ಬಂದಿದ್ದೇವೆ ಎಂದು ಹೇಳುತ್ತಾರೆ.

ನಾವು ವಾದ ಪತ್ರದಲ್ಲಿ ಉಪ ವಿಭಾಗ ಅಧಿಕಾರಿಗಳ ಮುಂದೆ ಮತ್ತು ಜಿಲ್ಲಾ ಅಧಿಕಾರಿಗಳ ಮುಂದೆ ನಾವು ಸಲ್ಲಿಸಿದ್ದ ಕೇಸ್ ಗಳು ವಜಾ ಆದವು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಪೀರ್ ಖಾನ್ ರವರಿಗೆ 8 ಜನ ಮಕ್ಕಳು ಎಂದರೆ ಸರಿ. 8 ಜನ ಮಕ್ಕಳು

ಬದುಕಿದ್ದೇವೆ . ನಿಪಿ-45 ನ್ನು ನಾವು ಹಾಜರುಪಡಿಸಿದ್ದೇವೆ . 1988 ರಲ್ಲಿ ವಿಭಾಗ ಆಗಿದೆ ಎಂದು ನಿಪಿ-45 ರಲ್ಲಿ ನಮೂದು ಮಾಡಿಲ್ಲ, ನಿಪಿ-45 ರ ಪ್ರಕಾರ ಮುಟೇಷನ್ ಆಗಿಲ್ಲ, ಪಾರುಕ್ ಅಲೀ ಖಾನ್ , ಉಮರ್ ಖಾನ್ , ಶಮೀಮ್ ಖಾನಮ, ನಸೀಮಾ ಬೇಗಂ ಮತ್ತು ತಸ್ಲಿಮ ಬೇಗಂ ರವರಗೆ ಹೇಳದೆ ಅವರಿಗೆ ಗೊತ್ತಾಗದಂತೆ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ, ಪ್ರತಿವಾದಿ  AC ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದಾಗ ಮೊದಲ ಬಾರಿ ನಾವು ನಿಪಿ-45 ನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿ. ನಿಪಿ-45 2018 ರಲ್ಲಿ ಆಗಿದ್ದು , ದಾಖಲಾತಿ ಆದ ನಂತರ ಮುಟೇಷನ್ ಮಾಡುವಂತೆ ತಹಶಿಲ್ದಾರ ಕಚೇರಿಗೆ ನಾವು ಅರ್ಜಿ ಕೊಟ್ಟಿಲ್ಲ, ಪಾರುಕ್ ಅಲೀ ಖಾನ್ , ಉಮರ್ ಖಾನ್ , ಶಮೀಮ್ ಖಾನಮ, ನಸೀಮಾ ಬೇಗಂ ಮತ್ತು ತಸ್ಲಿಮ ಬೇಗಂ ರವರು ಕೂಡ ಅರ್ಜಿ ಸಲ್ಲಿಸಿಲ್ಲ, ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ನಿಪಿ-45 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ,

ಸರ್ವೇ ನಂಬರ 66 , 3 ಎಕರೆ 6 ಗುಂಟೆ. ಪ್ರತಿವಾದಿ ಹೆಸರಲ್ಲಿ ಇತ್ತು ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ಆತನ ಹೆಸರಿಗೆ ಆಗಿತ್ತು ಎಂದರೆ ಸರಿ. ಸರ್ವೇ ನಂಬರ 66 ರ ಜಮೀನು ಒಂದು ಪ್ಲೋರ್ ಮಿಲ್ ಪ್ರತಿವಾದಿಯ ಭಾಗಕ್ಕೆ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,  ಪ್ಲೋರ್ ಮಿಲ್ ನಂಬರ ನನಗೆ ಗೊತ್ತಿಲ್ಲ, ಆ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ, ಪ್ರತಿವಾದಿ ಕಲಬುರಗಿಯಲ್ಲಿ ವಾಸವಿರುತ್ತಿದ್ದರು ಎಂದರೆ ಸರಿ. ನಾವು ಗ್ರಾಮದಲ್ಲಿ ವಾಸವಿದ್ದೇವು ಎಂದರೆ ಸರಿ . ಕಾರಣ ಪ್ರತಿವಾದಿ ದಾವಾ ಜಮೀನನ್ನು ಬಟಾಹಿ ಆದಾರದ ಮೇಲೆ ಮಾಡಲು ಕೊಟ್ಟಿದ್ದರು ಎಂದರೆ ಸರಿಯಲ್ಲ,

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್**
**ನ್ಯಾಯಾಧೀಶರು,ಸೇಡಂ.**